ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 3053/2023

ಸಿ.ಡಬ್ಲ್ಯೂ -01
ಪಿ.ಡಬ್ಲ್ಯೂ-01

**ಸಾಕ್ಷಿಗೆ ದಿಃ 29.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರಃ B.H.J. ವಕೀಲರಿಂದಃ**

ದೂರನ್ನು ಠಾಣೆಯ ಪಕ್ಕದಲ್ಲಿ ಬರೆಯಿಸಿ ನೀಡಿರುತ್ತೇನೆ. ದೂರನ್ನು ನೀಡಲು ನಾನು ಒಬ್ಬನೇ ಹೋಗಿರುತ್ತೇನೆ. ದೂರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಕೆಂಪಮ್ಮಾ ಅವರ ಗಂಡನ ಹೆಸರು ಶಿವಯ್ಯ ಆಗಿರುತ್ತದೆ. ಕವಿತಾ ಅವರ ಗಂಡನ ಹೆಸರು ಸತೀಶ್ ಆಗಿರುತ್ತದೆ. ದೂರಿನಲ್ಲಿ ಏನು ಬರೆದಿರುತ್ತಾಂದು ಓದಿ ತಿಳಿದುಕೊಂಡಿರುವುದಿಲ್ಲ. ಗಲಾಟೆ ಆಯಿತೆಂದು ಹೇಳುವ ದಿನ ಸ್ಥಳಕ್ಕೆ ಪೋಲಿಸರು ಮದ್ಯಾಹ್ನ ಬಂದಿದ್ದರು. ಕಂಬ ನೆಟ್ಟ ದಿನ ಸಹ ಪೋಲಿಸರು ಸ್ಥಳಕ್ಕೆ 2.30 ಗಂಟೆಗೆ ಬಂದಿರುತ್ತಾರೆ.

ನನ್ನನ್ನು ನಮ್ಮ ಗ್ರಾಮದಲ್ಲಿ ರಾಜೇಶ್ ಎಂತಲೇ ಕರೆಯುತ್ತಾರೆ ಬೇರೆ ಹೆಸರು ಇರುವುದಿಲ್ಲ. ನನ್ನ ತಾಯಿಯ ಹೆಸರು ಯಶೋದಮ್ಮಾ ಆಗಿದ್ದು ಅವರನ್ನು ಸಹ ಬೇರೆ ಹೆಸರಿನಿಂದ ಕರೆಯುವುದಿಲ್ಲ. ನನ್ನ ತಾಯಿಯನ್ನು 2.30 ರ ಸಮಯದಲ್ಲಿ ಕರೆದುಕೊಂಡು ಹೋಗಿರುತ್ತೇನೆ. ಅಲ್ಲಿ ಅವರಿಗೆ 15 ದಿನಗಳ ಕಾಲ ಚಿಕಿತ್ಸೆ ನೀಡಿರುತ್ತಾರೆ. ನಾನು ಸಹ ಅಲ್ಲಿಯೇ ಇದ್ದೆ.

ನಾನು ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ. ಮು. ಮಾ. ಅನ್ನು ನಾನು ನೋಡಿಲ್ಲವೆಂದರೆ ಸರಿಯಲ್ಲ. ಅದೇ ದಿನ ಪೋಲಿಸರು ಮಚ್ಚನ್ನು ತಗೆದುಕೊಂಡು ಹೋಗಿರುತ್ತಾರೆ. ಪೋಲಿಸರು ಮಚ್ಚನ್ನು ತಗೆದುಕೊಂಡು ಹೋದ ಬಳಿಕ ನಾವು ಆಸ್ಪತ್ರೆಗೆ ಹೋಗಿರುತ್ತೇವೆಂದು ಹೇಳುತ್ತಾರೆ.

ನಾನು ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ ನಾನು ಮತ್ತು ನನ್ನ ತಾಯಿ ಹೋಗಿರುತ್ತೇವೆ. ವೈದ್ಯರು ನನ್ನ ತಾಯಿ ಮತ್ತು ನನ್ನ ಹೆಸರನ್ನು ಕೇಳಿರುತ್ತಾರೆ. ವೈದ್ಯರಿಗೆ ನಾನು ನನ್ನ ಹೆಸರು ರಾಜೇಶ ಮತ್ತು ನನ್ನ ತಾಯಿಯ ಹೆಸರು ಯಶೋದಮ್ಮಾ ಎಂದು ಹೇಳಿರುತ್ತೇನೆ. ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಹೋದಾಗ ಸಮಯ 1.30 ಗಂಟೆ ಆಗಿತ್ತು. ಹು.ದುರ್ಗ ಆಸ್ಪತ್ರೆಯಲ್ಲಿ ವೈದ್ಯರು ಬ್ಯಾಂಡೇಜ್ ಅನ್ನು ಹಾಕಿರುತ್ತಾರೆ. ಎಕ್ಸೇರೇ ತಗೆಸಲು ಹೇಳಿರುತ್ತಾರೆ. ನಾವು ಎಕ್ಸರೇ ಮಾಡಿಸಿರುತ್ತೇವೆ ಅದನ್ನು ಪೋಲಿಸರಿಗೆ ನೀಡಿರುವುದಿಲ್ಲ. ಕುಣಿಗಲ್ ಸರಕಾರಿ ಆಸ್ಪತ್ರೆಯಲ್ಲಿಯೂ ಸಹ 15 ದಿನಗಳ ಕಾಲ ಚಿಕಿತ್ಸೆ ನೀಡಿರುತ್ತಾರೆ.

ದೂರಿನಲ್ಲಿ ಹೇಳಿರುವ ಸೈಟನ್ನು ನಾವು ಹುಚ್ಚೆಗೌಡ ನಿಂಗೇಗೌಡ ಅವರಿಂದ ಖರೀದಿ ಮಾಡಿರುತ್ತೇವೆ. ಸದರಿ ಕ್ರಯ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಸೈಟ್ ನ ಸುತ್ತು ಮುತ್ತ ಮೂಲತಃ ಸರಕಾರಿ ಜಾಗವೆಂದರೆ ಗೊತ್ತಿಲ್ಲವೆಂದು ಹೇಳುತ್ತಾರೆ. ನಾನು ಹೇಳುವ ಸೈಟನ ಜಾಗವನ್ನು ಸರಕಾರದವರು ನಮ್ಮ ಜನಾಂಗಕ್ಕೆ ಮಂಜೂರು ಮಾಡಿದ್ದರು ಎಂದರೆ ಸರಿ. ನಾವು ಖರೀದಿ ಮಾಡಿದ ಸೈಟನ ಮಾಲಿಕರು ಒಕ್ಕಲಿಗ ಜನಾಂಗದರು ಎಂದರೆ ಸರಿ. ನಾವು ಖರೀದಿ ಮಾಡಿದ ಸೈಟನ ಮಾಲಿಕರು ಹು.ದುರ್ಗ ಗ್ರಾಮ ಪಂಚಾಯಿತಿಯಲ್ಲಿ ಚುನಾವಣೆಗೆ ನಿಂತು ಗೆದ್ದಿದ್ದರು ಎಂದರೆ ಸರಿ.

ದಿನಾಂಕ 06.05.1978 ರಂದು ಸರ್ವೆ ನಂ ಜಾಗವನ್ನು ಆರೋಪಿ 1 ಅವರ ಗಂಡ ಕ್ರಯ ಪತ್ರದ ಮೂಲಕ ಖರೀದಿ ಮಾಡಿದ್ದರು ಎಂದರೆ ಸರಿ. ಸಾಕ್ಷಿ ಕೋರ್ಟನಲ್ಲಿ ನಮ್ಮಂತೆಯೇ ಆಗಿರುತ್ತದೆಂದು ಹೇಳುತ್ತಾರೆ. ಸದರಿ ಸೈಟನ ಮಾಲಿಕರು ಗ್ರಾಮ ಪಂಚಾಯಿತಿಯಲ್ಲಿ ಸದಸ್ಯರು ಆಗಿದ್ದಾಗ ಆರೋಪಿತರ ಗಮನಕ್ಕೆ ಬಾರದಂತೆ ಸದರಿ ಸೈಟನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಸದರಿ ನಕಲಿ ಖಾತೆಯ ಮೇಲೆ ನನ್ನ ತಾಯಿಗೆ ಕ್ರಯವಾಗಿದ್ದರಿಂದ ಅವರಿಗೆ ಯಾವುದೇ ಹಕ್ಕು ಮತ್ತು ಸ್ವಾ ಧೀನ ಇರುವುದಿಲ್ಲವೆಂದರೆ ಸರಿಯಲ್ಲ.

ಆರೋಪಿತರ ಸ್ವಾಧೀನದಲ್ಲಿದ್ದು ಸೈಟ ಆದಾಗಿದ್ದು ಅವರು ಅತಿಕ್ರಮ ಪ್ರವೇಶ ಮಾಡುವ ಪ್ರಶ್ನೇ ಬರುವುದಿಲ್ಲವೆಂದರೆ ಸರಿಯಲ್ಲ. ಚಾಸಾ 4ಅವರ ಕುಟುಂಬದವರು ಸದರಿ ಸೈಟನ್ನು ನಮಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಸೈಟನ ಮಾಲಿಕರು ಮತ್ತು ನಾವು ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಯಾವುದೇ ಗಲಾಟೆ ಆಗದಿದ್ದರೂ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ತಾಯಿಯ ಮೇಲೆ ಹಲ್ಲೆ ಮಾಡಿಲ್ಲ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಕೊಲೆ ಬೆದರಿಕೆ ಹಾಕಿಲ್ಲವೆಂದರೆ ಸರಿಯಲ್ಲ.

ಚಾಸಾ 2 ಅವರಿಗೆ ಯಾವುದೇ ಗಾಯಗಳು ಆಗದೇ ಇರುವ ಕಾರಣ ಹು.ದುರ್ಗ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆದಿಲ್ಲ ಕುಣಿಗಲ್ ಆಸ್ಪತ್ರೆಯಲ್ಲಿ ವೈದ್ಯರೊಂದಿಗೆ ಶಾಮಿಲಾಗಿ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸೇರಿದ ಜಾಗವನ್ನು ಖಬಳಿಸುವ ಉದ್ದೇಶದಿಂದ ನಾನು ಚಾಸಾ 2 ರಿಂದ 4 ಸೇರಿ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಮಹಜರ ಮತ್ತು ಮು. ಮಾ. ಅನ್ನು ಸೃಷ್ಟಿ ಮಾಡಿರುತ್ತೇವೆಎಂದರೆ ಸರಿಯಲ್ಲ. ಮು. ಮಾ. ಗೂ ಆರೋಪಿತರಿಗೂ ಮತ್ತು ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ನಾನು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.